# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/2983/2018/ಎಆರ್‌ಇ-15

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:16/05/2022.
176

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರನ್ವಯ ವರದಿ

ವಿಷಯ: ಶ್ರೀ. ಫಿರೋಜ್. ಎಂ.ಬಿ., ಪರಿಸರ ಅಭಿಯಂತರರು, ನಗರ ಸಭೆ, ಹಿರಿಯೂರು ಇವರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ದೂರುದಾರರಾದ ಶ್ರೀ.ವಿ.ಶಿವಣ್ಣ, ಹಿರಿಯೂರು ನಗರ ಸಭಾ ಸದಸ್ಯರು, ಹಿರಿಯೂರು *(ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ)* ಇವರು ಎಂ.ಬಿ.ಫಿರೋಜ್, ನಗರ ಸಭೆ ಪರಿಸರ ಅಭಿಯಂತರರು, ಹಿರಿಯೂರು *(ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ)* ಇವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಸಾರಾಂಶ:**

ದಿ.12.1.2018 ರಂದು ಹಿರಿಯೂರು ನಗರ ಸಭೆ ಚುನಾಯಿತ ಸದಸ್ಯರುಗಳು ಸಭೆಯಲ್ಲಿ ಸೇರಿ ಘನತ್ಯಾಜ್ಯ ವಸ್ತು ನಿರ್ವಹಣೆ ಘಟಕದಲ್ಲಿ ಸಿದ್ಧಪಡಿಸಲಾಗುತ್ತಿರುವ ಗೊಬ್ಬರವನ್ನು ರೈತರಿಗೆ ಅಗ್ಗದ ದರದಲ್ಲಿ ನೀಡುವ ಬಗ್ಗೆ ಸರ್ವಾನುಮತದಿಂದ ನಿರ್ಣಯವನ್ನು ತೆಗೆದುಕೊಂಡಿದ್ದರೂ ಎದುರುದಾರರಾದ ಎಂ.ಬಿ.ಫಿರೋಜ್, ನಗರ ಸಭೆ ಪರಿಸರ ಅಭಿಯಂತರರು ಸಭಾ ನಿರ್ಣಯವನ್ನು ಗಾಳಿಗೆ ತೂರಿ ನಿಯಮಗಳನ್ನು ಪಾಲಿಸದೇ ದಾಸ್ತಾನು ಮಾಡಲಾಗಿದ್ದ 5000 ಟನ್ ಗೊಬ್ಬರವನ್ನು ನಗರ ಸಭೆ ಆಯುಕ್ತರ ಗಮನಕ್ಕೆ ತರದೆ ದಿ.24.10.2018 ರಂದು ಎರಡು ಟ್ರ್ಯಾಕ್ಟರ್‌ಗಳಲ್ಲಿ ಕಳ್ಳ ಸಾಗಾಣೆ ಮಾಡಿರುತ್ತಾರೆ ಎಂದು ದೂರುದಾರರಾದ ವಿ.ಶಿವಣ್ಣ, ಹಿರಿಯೂರು ನಗರ

ಸಭಾ ಸದಸ್ಯರು ದೂರಿನಲ್ಲಿ ಆಪಾದಿಸಿದ್ದಲ್ಲದೆ ಒಂದು ಸಿ.ಡಿ.ಯನ್ನು ಸಹ ಒದಗಿಸಿರುತ್ತಾರೆ..

3. ದೂರಿನ ಆಪಾದನೆಗಳ ಬಗ್ಗೆ ತನಿಖಾ ಅವಶ್ಯಕತೆ ಕಂಡುಬಂದ ಕಾರಣ ಚಿತ್ರದುರ್ಗ ವಿಭಾಗ, ಕರ್ನಾಟಕ ಲೋಕಾಯುಕ್ತ ಪೋಲೀಸ್ ಅಧೀಕ್ಷಕರಿಗೆ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ತನಿಖೆ ಕೈಗೊಂಡು ದಿ.23.12.2019ರ ತನಿಖಾ ವರದಿಯಲ್ಲಿ ಈ ಕೆಳಕಂಡಂತೆ ಅಭಿಪ್ರಾಯಪಟ್ಟಿರುತ್ತಾರೆ.

> ***"ಕಸ ವಿಲೇವಾರಿ ಘಟಕದ ಮೇಲ್ವಿಚಾರಣೆ ಮತ್ತು ಉಸ್ತುವಾರಿಯನ್ನು ಶ್ರೀ ಫಿರೋಜ್ ಪಂಚಾಯ್ತಿ ಇಂಜಿನಿಯರ್ ರವರು ವಹಿಸಿಕೊಂಡಿದ್ದು, ಯಾವುದೇ ನಗರಸಭೆ ನಡಾವಳಿ ಇಲ್ಲದೆ, ಟೆಂಡರ್ ಪ್ರಕ್ರಿಯೆ ಇಲ್ಲದೆ, ಸರ್ಕಾರದ ನಿಯಮಾವಳಿ/ಆದೇಶವಿಲ್ಲದೆ ಸರ್ಕಾರಿ ಸ್ವತ್ತಾದ ಸ್ಕ್ರೀನಿಂಗ್ ಕಾರ್ಯದಿಂದ ಬಂದಂತಹ ಮಣ್ಣನ್ನು ವಿಲೇವಾರಿ ಮಾಡಿರುವುದು ಕಂಡು ಬಂದಿರುತ್ತದೆ. ಮತ್ತು ಸದರಿ ಸ್ಕ್ರೀನಿಂಗ್ ಮಣ್ಣು ವಿಲೇವಾರಿ ಮಾಡುವಾಗ ಎಷ್ಟು ಲೋಡ್ ವಿಲೇವಾರಿ ಮಾಡಿದ್ದಾರೆ ಎಂಬ ಬಗ್ಗೆ ಎಂ.ಬಿ. ಪುಸ್ತಕವನ್ನು ಬರೆದಿರುವುದಿಲ್ಲ. ಹಾಗೂ ಮಣ್ಣು/ಗೊಬ್ಬರ ವಿಲೇವಾರಿ ಪುಸ್ತಕವನ್ನು ನಿರ್ವಹಣೆ ಮಾಡಿರುವುದಿಲ್ಲ. ರೈತರಿಗೆ ಮಣ್ಣು/ಗೊಬ್ಬರ ಕೊಡುವಾಗ ಹಣ ಪಾವತಿ ಮಾಡಿದ ರಶೀದಿ ಪುಸ್ತಕವನ್ನು ಸಹ ನಿರ್ವಹಿಸದೇ ಇರುವುದು ವಿಚಾರಣಾಧಿಕಾರಿಯವರ ವರದಿ ಹಾಗೂ ದಾಖಲೆಗಳ ಪರಿಶೀಲನೆಯಿಂದ ತಿಳಿದುಬಂದಿರುತ್ತದೆ"***

4. ಎದುರುದಾರರಿಗೆ ದೂರು ಮತ್ತು ತನಿಖಾದಿಕಾರಿಯವರ ವರದಿಯನ್ನು ಕಳುಹಿಸಿ ಅವರ ಆಕ್ಷೇಪಣೆಗಳನ್ನು ಕರೆಯಲಾಗಿ, ಯಾವುದೇ ತರಹದ ಗೊಬ್ಬರ ಉತ್ಪಾದನೆ ಆಗಿರುವುದಿಲ್ಲ ಎಂಬ ಅಂಶವು ವಿಚಾರಣೆಯಿಂದ ಹೊರಬಂದಿರುವುದರಿಂದ ದೂರಿನಲ್ಲಿ ಆಪಾದಿಸಿರುವಂತೆ ಅಕ್ರಮವಾಗಿ ಗೊಬ್ಬರ ಮಾರಾಟ ಮಾಡಿರುವ ಆಪಾದನೆ ಶುದ್ಧ ಸುಳ್ಳಾಗಿರುತ್ತದೆ ಎಂದು ತಿಳಿಸಿದ್ದಲ್ಲದೆ ದೂರುದಾರರು ನಗರಸಭೆ ಸದಸ್ಯರಲ್ಲಿ ಪ್ರಭಾವಿಯಾಗಿ ಗುರುತಿಸಿಕೊಂಡಿದ್ದು ತಮ್ಮ ವಿರುದ್ಧ ಸುಳ್ಳು ಹೇಳಿಕೆಗಳ ಆಧಾರದ ಮೇಲೆ ತನಿಖಾ ವರದಿಯನ್ನು ಸಲ್ಲಿಸಿರುವುದರಿಂದ ಆ ವರದಿಯನ್ನು ತಿರಸ್ಕರಿಸಿ ನ್ಯಾಯ ಕೊಡಿಸಬೇಕೆಂದು ಎದುರುದಾರರು ಕೇಳಿಕೊಂಡಿರುತ್ತಾರೆ.

5. ದಿ.24.10.2018 ರಂದು ಎದುರುದಾರರು ನಗರಸಭಾ ಕಸಾ ವಿಲೇವಾರಿ ಘಟಕದಲ್ಲಿ ವಾಚ್‌ಮೆನ್ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ.ರಂಗಸ್ವಾಮಿ ರವರಿಗೆ ಫೋನ್ ಮಾಡಿ ಸುರೇಶ್ ಆಚಾರಿ ಮತ್ತು ಕಾರ್ತಿಕ್ ಎಂಬ ರೈತರಿಗೆ ಟ್ರ್ಯಾಕ್ಟರಗಳಲ್ಲಿ ನಗರಸಭಾ ಜೆ.ಸಿ.ಬಿ. ಸಹಾಯದಿಂದ ಗೊಬ್ಬರವನ್ನು ತುಂಬಿಸಿ ಕಳುಹಿಸಿದ್ದಾಗಿ ಸದರಿ ಶ್ರೀ.ರಂಗಸ್ವಾಮಿ ರವರು ತನಿಖಾಧಿಕಾರಿಯವರಿಗೆ ಹೇಳಿಕೆ ಕೊಟ್ಟಿರುತ್ತಾರೆ. ಟ್ರ್ಯಾಕ್ಟರಗಳಲ್ಲಿ ನಗರಸಭಾ ಜೆ.ಸಿ.ಬಿ. ಸಹಾಯದಿಂದ ಗೊಬ್ಬರವನ್ನು ತುಂಬಿಸಿ ಕಳುಹಿಸಿದ್ದಾಗಿ ಜೆ.ಸಿ.ಬಿ. ಚಾಲಕರಾದ ಶ್ರೀ.ಚಂದ್ರಶೇಖರ್ ರವರ ಹೇಳಿಕೆಯನ್ನೂ ಸಹ ತನಿಖಾಧಿಕಾರಿಯವರು ದಾಖಲು ಮಾಡಿಕೊಂಡಿರುತ್ತಾರೆ. ಒಟ್ಟು 2 ಟ್ರ್ಯಾಕ್ಟರ್ ಗಳಿಂದ 4 ಲೋಡ್ ಗೊಬ್ಬರವನ್ನು ತುಂಬಿಸಿದ್ದು ಈ ಪ್ರಕ್ರಿಯೆಯನ್ನು ಶಿವಣ್ಣನವರು ಚಿತ್ರೀಕರಣ ಮಾಡಿಕೊಂಡಿರುವ ವಿಚಾರವೂ ಸಹ ತನಿಖಾಧಿಕಾರಿಗಳಿಗೆ ಹೇಳಿಕೆಗಳನ್ನು ಕೊಡುವಾಗ ತಿಳಿಸಿರುವುದು ತನಿಖಾ ವರದಿಯಿಂದ ಕಂಡುಬರುತ್ತದೆ.

6. ಎದುರುದಾರರು ನೀಡಿರುವ ಸಮಜಾಯಿಸಿಯು ತನಿಖಾಧಿಕಾರಿಯವರು ನೀಡಿರುವ ವರದಿಗೆ ವಿರುದ್ಧವಾಗಿರುತ್ತದೆ. ಟ್ರ್ಯಾಕ್ಟರ್ ನೋಂದಣಿ ಸಂ.ಕೆಎ-16 ಟಿಎ-1091 ಹಾಗೂ ಮತ್ತೊಂದು ಟ್ರ್ಯಾಕ್ಟರ್ ಸಂ.ಎಪಿ-04 -1390 ಇವುಗಳಿಗೆ ಜೆ.ಸಿ.ಬಿ.ನೋಂದಣಿ ಸಂಖ್ಯೆ ಕೆಎ-16 ಎನ್-3183 ಸಹಾಯದಿಂದ ಗೊಬ್ಬರವನ್ನು ತುಂಬಿಸಿ 4 ಲೋಡ್ ಗೊಬ್ಬರವನ್ನು ತೆಗೆದುಕೊಂಡು ಹೋಗಿರುವುದನ್ನು ತನಿಖಾ ವರದಿಯಿಂದ ಕಂಡುಬರುತ್ತಿರುವುದರಿಂದ ಹಾಗೂ ಈ ಪ್ರಕ್ರಿಯೆಯನ್ನು ದೂರುದಾರರು ಚಿತ್ರೀಕರಣ ಮಾಡಿಕೊಂಡು ದೂರಿನೊಂದಿಗೆ ಸಿ.ಡಿ.ಯನ್ನು ಈ ಪ್ರಾಧಿಕಾರಕ್ಕೆ ಒದಗಿಸಿರುವುದರಿಂದ ದೂರಿನಲ್ಲಿ ಮಾಡಿರುವ ಆಪಾದನೆಗಳು ಎದುರುದಾರರೇ ಮಾಡಿರುತ್ತಾರೆಂದು ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡುಬರುತ್ತದೆ. ಆದುದರಿಂದ, ಎದುರುದಾರರ ಸಮಜಾಯಿಸಿಯನ್ನು ಒಪ್ಪಕೊಂಡು ತನಿಖಾಧಿಕಾರಿಯವರ ತನಿಖಾವರದಿಯನ್ನು ತಿರಸ್ಕರಿಸಲು ಯಾವುದೇ ಸಕಾರಣಗಳು ಕಂಡುಬರುವುದಿಲ್ಲ. ದಿ.23.12.2019ರರ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ವಿಭಾಗ ಇವರ ತನಿಖಾ ವರದಿಯಲ್ಲಿ ಎದುರುದಾರರು

ಕರ್ತವ್ಯಲೋಪವೆಸಗಿರುವುದು ಕಂಡು ಬರುತ್ತದೆ ಎಂದು ಸ್ಪಷ್ಟ ವಿವರಗಳನ್ನು ನೀಡಿರುವುದರಿಂದ, ದೂರಿನಲ್ಲಿ ಮಾಡಿರುವ ಆಪಾದನೆಗಳನ್ನು ಕೈಬಿಡಲು ಸಾಧ್ಯವಿಲ್ಲ.

7. ಆದ್ದರಿಂದ, ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

17/05/22

**[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]**
**ಉಪಲೋಕಾಯುಕ್ತ-2 ರವರು,**
**ಕರ್ನಾಟಕ ರಾಜ್ಯ, ಬೆಂಗಳೂರು.**